

## ಥೋ ಥೋ ತೋತಾಪುರಿ

‘ನೀರ್ ದೋಸೆ’ ಚಿತ್ರದಲ್ಲಿ ಜಗ್ಗೇಶ್ ಮತ್ತು ವಿಜಯಪ್ರಸಾದ್ ಕಾಂಬಿನೇಷನ್ ತುಂಬ ಚೆನ್ನಾಗಿ ಕೆಲಸ ಮಾಡಿತ್ತು. ಕಚಗುಳಿ ಇಡುವ ಡೈಲಾಗ್‌ಗಳು, ಜಗ್ಗೇಶ್ ವಿಶಿಷ್ಟ ಮ್ಯಾನರಿಸಂ, ದತ್ತಣ್ಣನ ಪೋಲಿತನ, ಹರಿಪ್ರಿಯಾ ಅಂಗಸೌಂದರ್ಯ ಎಲ್ಲವೂ ಸೇರಿಸಿ ಹೊಯ್ದ ‘ನೀರ್ ದೋಸೆ’ ಚೆನ್ನಾಗಿಯೇ ಮಾರಾಟ ಆಗಿತ್ತು. ಅದರ ನಂತರ ವಿಜಯಪ್ರಸಾದ್ ‘ಲೇಡೀಸ್ ಟೈಲರ್’ ಸಿನಿಮಾ ಮಾಡಲಿದ್ದಾರೆ ಎಂದೂ ಸುದ್ದಿಯಾಗಿತ್ತು. ಆದರೆ ಕೈಗೆತ್ತಿಕೊಂಡ ಸಿನಿಮಾಗಳನ್ನೆಲ್ಲ ಸರಿಯಾದ ಸಮಯಕ್ಕೆ ಮಾಡಿ ಮುಗಿಸುವುದು ವಿಜಯಪ್ರಸಾದ್ ಹಣೆಯಲ್ಲಿಯೇ ಬರೆದಿಲ್ಲವೆನಿಸುತ್ತದೆ. ಇದೀಗ ‘ಲೇಡೀಸ್ ಟೈಲರ್’ನನ್ನು ಬದಿಗೆ ಸರಿಸಿ ‘ತೋತಾಪುರಿ’ ಹಣ್ಣಾಗಿಸಲು ಹೊರಟಿದ್ದಾರೆ ವಿಜಯಪ್ರಸಾದ್. ಜಗ್ಗೇಶ್ ಅವರ ಪರಿಪರಿ ಮೆರೆದಾಟಗಳು ಇಲ್ಲದೆ ತೋತಾಪುರಿ ಮಾಗಲು ಸಾಧ್ಯವೇ? ಅವರೂ ವಿಜಯಪ್ರಸಾದ್ ಅವರ ಪ್ರಯತ್ನದಲ್ಲಿ ಜತೆಯಾಗಿದ್ದಾರೆ.

ಹೆಸರೇ ಒಂಥರ ವಿಚಿತ್ರವಾಗಿದೆಯಲ್ಲ. ಇದೇನು ದೋಸೆ, ಮಾವಿನಹಣ್ಣು ಇವನ್ನೆಲ್ಲ ದ್ವಂದ್ವಾರ್ಥದ ಬಣ್ಣ ಬಳಿದು ಸಿನಿಮಾ ಆಗಿಸಿದರೆ ನಾವು ಹೊಟ್ಟೆಗೇನು ತಿನ್ನುವುದು ಅಂತ ಸಂಪ್ರದಾಯಸ್ಥರು ತಲೆಕೆರೆದುಕೊಳ್ಳುತ್ತಿದ್ದರೆ, ಅತ್ತ ವಿಜಯಪ್ರಸಾದ್, ಜಗ್ಗೇಶ್ ಅವರ ತಲೆಗೊಂದು ಟವೆಲ್ ಕಟ್ಟಿ ತೋಟಕ್ಕೆ ಅಟ್ಟಿ ಮಾವಿನ ಮರಕ್ಕೆ ಹತ್ತಿಸುತ್ತಿದ್ದಾರಂತೆ. ಈ ಚಿತ್ರದಲ್ಲಿ ಜಗ್ಗೇಶ್ ರೈತನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲಿಗೆ ಉತ್ತಿ ಬಿತ್ತಿ ಮಾಡುವ ವ್ಯವಸಾಯಕ್ಕೆ ಮತ್ತೊಂದು ಅರ್ಥಸಾಧ್ಯತೆಯನ್ನೂ ಅಂಟಿಸುವುದು ಗ್ಯಾರಂಟಿ.

ಜಾತಿ ರಾಜಕಾರಣ ಮತ್ತು ವರ್ಣತಾರತಮ್ಯದ ಕುರಿತಾಗಿ ಈ ಸಿನಿಮಾ ಇದೆಯಂತೆ. ಬಣ್ಣಗಿಣ್ಣ ಎಲ್ಲ ಮರೆತು ಮೈಬೆಚ್ಚಗೆ ಮಾಡಿಸುವುದಕ್ಕೆ ಸುಮನ್ ರಂಗನಾಥ್ ಅವರಂತೂ ಇದ್ದೇ ಇರುತ್ತಾರೆ. ಜತೆಗೆ ಅದಿತಿ ಪ್ರಭುದೇವ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ. ಅನೂಪ್ ಹಾಡುಗಳ ಮೋಡಿಯೂ ಇರಲಿದೆ. ‘ತೋತಾಪುರಿ’ ಹಣ್ಣಾಗಿ ಮಾರುಕಟ್ಟೆಗೆ ಬರಲು ಇನ್ನಷ್ಟು ದಿನ ಕಾಯಲೇಬೇಕು.

## ಸೂರಿ ಟಂಕಸಾಲೆಯಲ್ಲಿ ಕೃಷ್ಣಸುಂದರಿ

ಅವಕಾಶಕ್ಕಾಗಿ ಹಾತೊರೆಯುವ ಚೆಲುವೆಯರ ಗುಂಪಿನಲ್ಲಿ ಭಿನ್ನವಾಗಿ ಕಾಣಿಸುವ ನಟಿ ನಿವೇದಿತಾ. ಇವರು ನಟಿಸಿರುವ ಚಿತ್ರಗಳು ವಿರಳವಾದರೂ ಪಾತ್ರ ವೈವಿಧ್ಯದಲ್ಲೇ ನಟಿಯಾಗಿ ಅವರ ಬೆಳವಣಿಗೆಯನ್ನು ಸ್ಪಷ್ಟವಾಗಿ ಗುರ್ತಿಸಬಹುದು. ‘ಡಿಸೆಂಬರ್ 1’ ಚಿತ್ರದ ಪಾತ್ರಕ್ಕಾಗಿ ರಾಜ್ಯಪ್ರಶಸ್ತಿಯನ್ನು ಪಡೆದುಕೊಂಡಿರುವ ನಿವೇದಿತಾ, ‘ಶುದ್ಧಿ’ ಚಿತ್ರದ ಪಾತ್ರದ ಮೂಲಕ ಇನ್ನಷ್ಟು ಸುದ್ದಿಯಾಗಿದ್ದರು.

‘ನಟನೆಯೊಂದೇ ನನ್ನ ಬದುಕಿನ ಗುರಿಯಲ್ಲ’ ಎಂದು ಸ್ಪಷ್ಟವಾಗಿ ಹೇಳುವ ಈ ಕೃಷ್ಣಸುಂದರಿಯ ವ್ಯಕ್ತಿತ್ವದ ಚಾಚುಗಳು ಬರವಣಿಗೆ, ಪ್ರವಾಸ, ರಂಗಭೂಮಿ ಹೀಗೆ ಹಲವು ವಲಯಗಳಲ್ಲಿ ವಿಸ್ತರಿಸಿಕೊಂಡಿವೆ. ಅಚ್ಯುತ್‌ಕುಮಾರ್ ನಿರ್ದೇಶನದ ‘ಕೊಳ’ ನಾಟಕದಲ್ಲಿಯೂ ನಟಿಸಿ ಅವರು ಸೈ ಎನಿಸಿಕೊಂಡಿದ್ದಾರೆ.

‘ನಟನೆಯೆಂಬುದು ತಾದ್ಯಾತ್ಮ ಮತ್ತು ಅಧ್ಯಾತ್ಮದ ಸಂಗಮ’ ಎಂದು ಭಾವಿಸಿರುವ ಅವರು, ಇದೀಗ ಸೂರಿ ಪಾಳಯದಲ್ಲಿ ಪಾತ್ರ ಗಿಟ್ಟಿಸಿಕೊಂಡಿದ್ದಾರೆ. ಸೂರಿ ಅವರ ನಿರ್ದೇಶನದ ಹೊಸ ಚಿತ್ರ ‘ಪಾಪ್‌ಕಾರ್ನ್ ಮಂಕಿ ಟೈಗರ್’ ಚಿತ್ರದಲ್ಲಿ ಮುಖ್ಯಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿರುವುದು ತಮ್ಮ ನಟನಾಬದುಕಿನ ದೊಡ್ಡ ಜಿಗಿತ ಎಂದು ಅವರಿಗೂ ಅನಿಸಿದೆ.

ನಾಯಕಿ ಅಂದಮೇಲೆ ಸೌಂದರ್ಯ, ಗ್ಲ್ಯಾಮರ್ ಎಂದು ಅಂದುಕೊಳ್ಳುವವರಿಗೆ ಅಚ್ಚರಿಯಾಗುವಂತೆ ಅವರು ಮಗುವೊಂದನ್ನು ಮಡಿಲಲ್ಲಿ ಎತ್ತಿಕೊಂಡು ಮುದ್ದು ಮಾಡುತ್ತಿರುವ ಪೋಸ್ಟರ್ ಬಿಡುಗಡೆಯಾಗಿದೆ. ‘ಪಾಪ್‌ಕಾರ್ನ್ ಮಂಕಿ ಟೈಗರ್’ನಲ್ಲಿ ಅವರ ಪಾತ್ರದ ಹೆಸರು ದೇವಿಕೆ ಎಂದು. ಧನಂಜಯ್ ಈ ಚಿತ್ರದ ನಾಯಕ. ಕಸದ ರಾಶಿಯ ಮೇಲೆ ಮಲಗಿರುವ, ಜಾರುತ್ತಿರುವ ಪ್ಯಾಂಟನ್ನು ಎತ್ತಿಕೊಳ್ಳುತ್ತಾ ಸಾಗುತ್ತಿರುವ ಧನಂಜಯ್ ಅವರ ಚಿತ್ರವಿರುವ ಪೋಸ್ಟರ್, ‘ಇದೊಂದು ರಾ ಕಥೆಯ ಸಿನಿಮಾ’ ಎನ್ನುವುದನ್ನು ಖಾತ್ರಿಪಡಿಸುವಂತಿದೆ.

ನಿವೇದಿತಾ ಪ್ರತಿಭಾವಂತ ನಟಿ. ಸೂರಿ ಕಲಾವಿದರೊಳಗಿನ ಪ್ರತಿಭೆಗೆ ಸಾಣೆ ಹಿಡಿಯುವುದರಲ್ಲಿ ಸಿದ್ಧಹಸ್ತರು. ಅವರ ಟಂಕಸಾಲೆಯಲ್ಲಿ ಸಿಕ್ಕ ನಿವೇದಿತಾ ಹೊಸ ಹೊಳಪಿನೊಂದಿಗೆ ತೆರೆಯ ಮೇಲೆ ಕಾಣಿಸಿಕೊಳ್ಳಬಹುದು ಎಂಬ ನಿರೀಕ್ಷೆಯನ್ನಂತೂ ಖಂಡಿತ ಇರಿಸಿಕೊಳ್ಳಬಹುದು.

